



ನದಿಗೆ ಸೇರುವ ನೀರು ಮುಂಜಾನೆಯೇ ಹೆಚ್ಚಾಗಿತ್ತು. ಜೊತೆಗೆ ಜೋರು ಗಾಳಿಯೂ ಇತ್ತು. ನಮ್ಮ ದೋಣಿಯ ನಾವಿಕ ಹುಟ್ಟಿನಿಂದ ದೋಣಿಯನ್ನು ನಮಗೆ ಬೇಕಾದ ಹಾಗೆ ಚಲಿಸಲು ಸಾಹಸಪಡುತ್ತಿದ್ದ. ನದಿ ಮತ್ತು ಸಮುದ್ರದ ದಂಡೆಯಲ್ಲಿ ಹುಟ್ಟಿಬೆಳೆದವನಾದ್ದರಿಂದ ಆತನ ದೃಷ್ಟಿ ನಮಗಿಂತ ಸೂಕ್ಷ್ಮ ಮತ್ತು ತೀಕ್ಷ್ಣ.

'ಸರ, ಅಲ್ಲಿ ದೂರದಲ್ಲೊಂದು ವೈಟ್ ಬಿಲ್ಲಡ್ ಸೀ ಈಗಲ್ ಕುಳಿತಿದೆ. ಅದರೆಡೆಗೆ ಹೋಗೋಣವೇನು?' ಎಂದು ಕೇಳಿದವನು, ಅತ್ತ ಕಡೆಗೆ ದೋಣಿಯ ಮುಖ ಮಾಡಿದ. ನಾವು ದೂರದಿಂದಲೇ ಒಂದಷ್ಟು ಫೋಟೊಗಳನ್ನು ಕ್ಲಿಕ್ಕಿಸಿದೆವಾದರೂ, ಸಾಧ್ಯವಾದಷ್ಟು ಹತ್ತಿರದಿಂದ ಫೋಟೊ ತೆಗೆಯುವ ಆಸೆಯಲ್ಲಿ ಕ್ಯಾಮೆರಾ ಫೋಕಸ್ ಮಾಡಿಟ್ಟುಕೊಂಡು ಕಾಯುತ್ತಿದ್ದೆವು.